Golden Research Thoughts
ISSN 2231-5063
Impact Factor : 3.4052(UIF)
Volume-4 | Issue-8 | Feb-2015
Available online at www.aygrt.isrj.org

# ಡಾ. ಡಿ.ವಿ. ಹಳ್ಳಿಗುಡಿಯವರ ‘ಅನುಬಂಧದ ಸಂಬಂಧ’ ಕಾದಂಬರಿಯಲ್ಲಿ ಮಾನವ ಸಂಬಂಧಗಳು

**ಶಿವಗಂಗಾ U. ಬಿಲಗುಂದಿ**

ಕನ್ನಡ ಅಧ್ಯಯನ ಸಂಸ್ಥೆ, **ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ**

ಡಾ.ಹಳ್ಳಿಗುಡಿಯುವರ ಕಾದಂಬರಿ ಮಾನವ ಸಂಬಂಧಕ್ಕೆ ಕನ್ನಡಿ ಹಿಡಿದ ಹಾಗೆ ಇದೆ. ಸುಮಾರು ನೂರುಪುಟಕ್ಕಿಂತ ಕಡಿಮೆ ಚಿಕ್ಕ ಗಾತ್ರದ ಕಾದಂಬರಿ ಇದಾಗಿದೆ. ಯಾರು ಬೇಕಾದರು ಓದಬಹುದು ಅತ್ಯಂತ ಸರಳ ಶೈಲಿಯಲ್ಲಿದೆ. ಕ್ಲಿಷ್ಟಕರ ಭಾಷೆಯನ್ನು ಬಳಸದೆ ಅತ್ಯಂತ ಸರಳವಾದ ನಿರೂಪಣೆ ಇಲ್ಲಿದೆ. ಕಾದಂಬರಿ ಕಾರರೆ ಕಥೆ ಹೇಳುತ್ತಾ ಸಾಗುತ್ತಾರೆ. ಓದುಗ ಕಥೆ ಆಲಿಸುತ್ತಾ ನಡೆಯಬೇಕು. ಇದರ ವಸ್ತು ಕೊಪ್ಪಳ, ಮತ್ತು ಚಿಕ್ಕಮಗಳೂರಿನ ಎರಡು ಶ್ರೀಮಂತ ಕುಟುಂಬಗಳನ್ನು ಒಳಗೊಂಡಿದೆ. ಒಪ್ಪಂದ ಮದುವೆ ಒಂದು ಮಾನವೀಯ ಸಂಬಂಧಕ್ಕೆ ಸೇತುವೆಯಾಗಿ ನಿಲ್ಲುತ್ತದೆ.

ಜಿ.ವಂ. ಶಿರಹಟ್ಟಿಯವರು ಮುನ್ನುಡಿಯಲ್ಲಿ ಹೇಳಿದಂತೆ “ನೀವು ನಾವುಗಳನ್ನು ಜೋಡಿಸುವ ಎಳೆಗಳು ಸಂಬಂಧ ಎಂಬ ಹೊದಿಕೆಯನ್ನು ನೆಯ್ಯುತ್ತವೆ.ಇದು ಮಾನವ ಸಮಾಜದಲ್ಲಿ ನಡೆಯುವ ನಿರಂತರ ಪ್ರಕ್ರಿಯೆ. ಅಂತೇಯೆ ನಾವು ಎನ್ನುವ ಉತ್ತರ ದಿಕ್ಕಿನಲ್ಲಿರುವ ಗುಂಪು ನೀವು ಎನ್ನುವ ದಕ್ಷಿಣ ದಿಕ್ಕಿನಲ್ಲಿರುವ ಗುಂಪನ್ನು ಸೇರಿದ್ದಾರೆ. ನಾವು ನೀವಾಗುವ ನೀವು ನಾವಾಗುವ ಸಂಬಂಧ ಗಳ ಸೃಷ್ಟಿಯಾಗಬೇಕು ಸಂಬಂಧಗಳೆಂದರೆ ಕೇವಲ ದಾಯಾದಿಗಳಲ್ಲ ಒಂದನ್ನು ಕೊಟ್ಟು ಇನ್ನೊಂದನ್ನೆ ಪಡೆಯುವುದೇ ಸಂಬಂಧ ಇಂತಹ ಸಂಬಂಧವೊಂದರ ಹಂದರವನ್ನೆ ಡಾ. ಡಿ.ವಿ. ಹಳ್ಳಿಗುಡಿ ಅವರು ಕಟ್ಟಿ ಅದರ ನೆರಳಲ್ಲಿ ಅನುಬಂಧದ ಸಂಬಂಧಗಳ ಪಲ್ಲವಿ ಹಾಡಿದ್ದಾರೆ”.[೧] ಹೀಗೆ ಮಾನವೀಯ ಸಂಬಂಧ ಮೇಲೆ ಈ ಕಾದಂಬರಿ ರಚಿತವಾಗಿದೆ.

ಬಸವರಾಮಪ್ಪ, ಚಂದ್ರಶೇರಯ್ಯ ಇಬ್ಬರು ಕುಟುಂಬ ಯಜಮಾನರು ಕಾದಂಬರಿಯ ತುಂಬ ತಮ್ಮ ಸರಳ ಸಜ್ಜನಿಕೆ ನಡವಳಿಕೆಯಿಂದ ಎಲ್ಲರ ಮನಸ್ಸಿನಲ್ಲಿ ಹಾದುಹೋಗುವ ಸರಳ ಸಜ್ಜನರು. ಇದರ ಕಥಾವಸ್ತು ನಮ್ಮ ಸಮಾಜದಲ್ಲಿ ಹರಿಯುವ ನಿರಂತರ ಅನುಬಂಧದ ಸಂಬಂಧಗಳ ನದಿಯಂತೆ ಹರಿಯುತ್ತದೆ. ಕಥೆ ಬೆಳವಣಿಗೆ ಸ್ವಭಾವಿಕ ಹಂತವನ್ನು ತಲುಪಿ ಕೊನೆಗೆ ನೀಡುವ ಸಂದೇಶವೆಂದರೆ, ಸುಖ ದುಃಖ ಸಂತೋಷಗಳ ಏರುಪೇರು ಸಂಬಂಧಗಳು ಅಲುಗಾಡದೆ ಗಟ್ಟಿಯಾಗಿರಬೇಕು ಎಂದು ಕಾದಂಬರಿಕಾರರು ಅಭಿಪ್ರಾಯ ಪಡುತ್ತಾರೆ. ಈ ಎರಡು ಕುಟುಂಬಗಳ ನಡುವೆ ನಡೆದ ಮದುವೆ ರಸದೌತಣಕ್ಕೆ ಕಾರಣವಾಗುತ್ತದೆ.

ಬಸವರಾಜಪ್ಪನವರು ಶ್ರೀಮಂತ ರಾಗಲೂ ಅವರ ಸರಳ ಮತ್ತು ಸಜ್ಜನಿಕೆಯ ಕಾರಣವಾಯಿತು. ಅವರ ಪೆಟ್ರೋಲ್ ಬಂಕಿನಲ್ಲಿ ಒಂದು ಬೋರ್ಡ ಹಾಕಿಸಿದರು “ನಮ್ಮ ಪೆಟ್ರೋಲ್ ಬಂಕಿನ ಪೆಟ್ರೋಲಿನಲ್ಲಿ ಮಿಲ್‌ವಟ್ ಅಥವಾ ಅಳತೆಯಲಿ ಕಮ್ಮಿ ಇದೆ ಎಂದು ತೋರಿಸಿ ಕೊಟ್ಟವರಿಗೆ ಎರಡು ಸಾವಿರ ರೂಪಾಯಿ ನಗದು ಬಹುಮಾನವಾಗಿ ಕೊಡಲಾಗುತ್ತದೆ.”[೨] ಎಂದು ತಮ್ಮ ಪೆಟ್ರೋಲ್ ಬಂಕಿನ ಮುಂದೆ ದೊಡ್ಡದೊಂದು ಬೋರ್ಡ ಹಾಕಿಸಿದ್ದರು. ಹೀಗಾಗಿ ಜನರು ಪೆಟ್ರೋಲ್‌ಬಂಕಿನಲ್ಲಿ ಸಾಲುಸಾಲಾಗಿ ವಾಹನಗಳಿಗೆ ಪೆಟ್ರೋಲ್ ಹಾಕಿಸಿಕೊಂಡು ಹೊಗುತ್ತಿದ್ದರು. ಸಿನೇಮಾ ಥೇಟರ ಮ್ಯಾನೇಜರ ಶಿವಣ್ಣನನ್ನು ಕುರಿತು ಬೋರ್ಡ ಹಾಕಿದ್ದಾರಾ ಎಂದು ಕೇಳಿದರು. “ಬ್ಲ್ಯಾಕ್‌ನಲ್ಲಿ ಟಿಕೆಟ್ ಮಾರುವವರನ್ನು ಹಿಡಿದು ಕೊಟ್ಟವರಿಗೆ ಎರಡು ಸಾವಿರ ರೂಪಾಯಿ ನಗದು ಹಣವನ್ನು ಬಹುಮಾನವಾಗಿ ಕೊಡುಲಾಗುವದು” ಎಂದು ಬರೆಯಸಿದ್ದ ಬೋರ್ಡನ್ನು ಟಿಕೆಟ್ ಕೊಡುವಸ್ಥಳ ದಲ್ಲಿ ತೂಗು ಹಾಕಿಸಲು ಶಿವಣ್ಣನಿಗೆ ಹೇಳಿದರು”. ತದನಂತರ ಮಿಲ್‌ಗೆ ಬಂದು ಗುರುಬಸಯ್ಯನವರಿಗೆ ವಿಚಾರಿಸಿ ನಂತರ ಮನೆಗೆ ಬರುತ್ತಿದ್ದರು.

ಮೊದಲು ಟಾಂಗಾದಲ್ಲಿ ಓಡಾಡುತ್ತಿದ್ದ ಬಸವರಾಜಪ್ಪನವರು ನಂತರ ಕಾರು ತೆಗೆದುಕೊಂಡು, ನಂತರ ಮತ್ತೊಂದು ಕಾರು ಮಗ ಸಂಜಯನ ಸಲುವಾಗಿ ತೆಗೆದುಕೊಂಡರು. ಗಂಗೂ ಅಂಟಿಯ ನೇತೃತ್ವದಲ್ಲಿ ತಮ್ಮ ಎರಡು ಗಂಡುಮಕ್ಕಳ ಹಾಗೂ ಒಬ್ಬ ಹೆಣ್ಣುಮಗಳ ಸುಕನ್ಯಾಳನ್ನು ಬೆಂಗಳೂರಿನಲ್ಲಿ ಮನೆಮಾಡಿ ಇಟ್ಟಿದ್ದರು. ಅಲ್ಲಿಂದ ಉತ್ತಮ ಶಿಕ್ಷಣ ಪಡೆದ ಅವರ ಮಕ್ಕಳು ಮೊದಲನೆ ಮಗ ಜಗದೀಶ ಮದುವೆ ಮಾಡಿಕೊಂಡು ಅಮೇರಿಕಾಕ್ಕೆ ಹೊರಟು ಹೋದನು ಎರಡನೇಯವನು ಸಂಜಯ ವ್ಯವಹಾರ ನೋಡಿಕೊಳ್ಳುತ್ತಿದ್ದನು.

ಬಸವರಾಜಪ್ಪನವರಿಗೆ ಮಗಳದೆ ಒಂದು ದೊಡ್ಡ  ಚಿಂತೆಯಾಯಿತು. ಮಗಳ ಮದುವೆ ಮಾಡಲು ವರ ಹುಡುಕಲು ಪ್ರಾರಂಭಿಸಿದರು.  ಶಂಕ್ರಪ್ಪನವರ ಸಹಾಯದಿಂದ ಕೊಪ್ಪಳದ ಚಂದ್ರಶೇಖರಯ್ಯನವರ ಮಗ ರವಿ ಜೊತೆ ನೆಂಟಸ್ಥಿಕೆಯಾಗಿ ಭಾರಿ ವಿಜೃಂಭಣೆಯಿಂದ ಮದುವೆ ನೆರವೇರಿತು.

ಬಸವರಾಜಪ್ಪನವರ ಮಿಲ್‌ನಲ್ಲಿ ಕೆಲಸ ಮಾಡುವ  ಮಲ್ಲಿಕಾರ್ಜುನ ಓಡಿಹೋಗುತ್ತಾನೆ.  ಬೀದಿಗೆ ಬಂದ ಅವಳ ಹೆಂಡತಿ ಚಂದ್ರಿಕಾಳಿಗೆ ಆಸರೆಯಾಗುತ್ತಾರೆ.  ಮಿಲ್‌ನಲ್ಲಿ ಕೆಲಸಕೊಡುತ್ತಾರೆ ತದನಂತರ ಇಬ್ಬರಲ್ಲಿ ಅನೈತಿಕ ಸಂಬಂಧ ಬೆಳೆಯುತ್ತದೆ.  ಚಂದ್ರಿಕಾ ಬಸವರಾಜಪ್ಪನವರಿಂದ ಏನನ್ನು ನಿರೀಕ್ಷಿಸುವುದಿಲ್ಲಾ ಆದ್ದರಿಂದ ಅವಳ ಗುಣಕ್ಕೆ ಮೆಚ್ಚಿ ಬಸವರಾಜಪ್ಪನವರು ತಮ್ಮ ಹೆಸರು ಬರದಂತೆ ಗುರುಬಸವಯ್ಯನವರ ಸಹಾಯದಿಂದೊಂದು ಮನೆ ಹತ್ತು ಲಕ್ಷಕ್ಕೆ ಕೊಪ್ಪಳದಲ್ಲಿ ಮನೆ ಖರೀದಿಸುತ್ತಾರೆ.  ಖರೀದಿ ಮಾಡಿ ಚಂದ್ರಿಕಾಳ ಹೆಸರಿಗೆ ರಜಿಸ್ಟ್ರೇಶನ್ ಮಾಡಿಸುತ್ತಾರೆ.  ಇದು ಅವರ ದೊಡ್ಡಗುಣ ಸಾಯುವ ಸಂದರ್ಭದಲ್ಲಿ ಚಂದ್ರಿಕಾಳೆ, ಆಸರೆಯಾಗಿ ನಿಲ್ಲುತ್ತಾಳೆ. ಇದೆಲ್ಲಾ ತಿಳಿದ ಹೆಂಡತಿ ಎಂದು ವಿರೋಧಿಸುವುದಿಲ್ಲ  ಹಾಗೇಯೆ ಇವರ ಮಗ ಸಂಜಯನೂ ಸಹ ಚಂದ್ರಿಕಾ ಸತ್ತನಂತರ ಅವಳು ಬರೆದುಹೋದ ವಿಲ್‌ನಂತೆ ಪೊಲೀಸ ಬಿಗಿ ಬಂದೋಬಸ್ತನಲ್ಲಿ ಓದಿಸುತ್ತಾರೆ.  ಅನಾಥ ಮಗುವಾಗಿ ಚಂದ್ರಿಕಾಳ ಸಹಾಯಕ್ಕೆ ನಿಂತ ಬಸವನ ಹೆಸರಿಗೆ ಬರೆದಿರುತ್ತಾಳೆ. ಅವಳ  ಬೆಳ್ಳಿ, ಬಂಗಾರ,  ಮನೆ ಎಲ್ಲವೂ ಬಸವನಿಗೆ ಬರುತ್ತದೆ.

ಚಂದ್ರಶೇಖರಯ್ಯ ನವರು ತೀರಿಕೊಂಡನಂತರ ರವಿ ಏಕಾಂಗಿಯಾಗುತ್ತಾನೆ.  ಚಂದ್ರಶೇಖರಯ್ಯ ನವರು ಮಕ್ಕಳಂತೆ ಸಾಕಿದ ಅಂಥೋಣಿ, ಪಿಳ್ಳೆ, ನಾಗೇಗೌಡರನ್ನು ತಾವೂ ಉಳಿಮೆ ಮಾಡಿಕೊಂಡು ಬರತ್ತಿದ್ದ  ಹೊಲವನ್ನು ಅವರಿಗೆ ಬಿಟ್ಟುಕೊಡುತ್ತಾನೆ.  ಮತ್ತು ಅವರ ಹೆಸರಿಗೆ ಬರೆದು ಕೊಡುತ್ತಾನೆ, ಮತ್ತು  ಆತನ ಅಣ್ಣನೂ ಸಹ ಆತನ ಹತ್ತೀರ ಪಾಲು ತೆಗೆದು ಕೊಳ್ಳದೆ ಅಮೇರಿಕಾಕ್ಕೆ ಹೋಗುತ್ತಾನೆ.

ಬಸವರಾಜಪ್ಪನವರು ತೀರಿಕೊಂಡ ಸ್ವಲ್ಪದಿನಗಳಲ್ಲೇ ಚಂದ್ರಿಕಾ ಚಿಂತೆಯಲ್ಲಿಯೇ ಸಾಯುತ್ತಾಳೆ.  ಬಸವರಾಜಪ್ಪ ಸತ್ತ ನಾಲ್ಕು ಐದು ದಿನಕ್ಕೆ ಬಂದ ಜಗದೀಶ ತಂದೆಯ ಎಲ್ಲ ವಿಧಿವಿಧಾನಗಳು ನೇರವೇರಿಸುತ್ತಾನೆ.  ಸಂಜಯ ತಂದೆಯ ಆಸ್ಥಿಯನ್ನು ಪಾಲುಮಾಡಿಕೊಂಡು ಅಮೇರಿಕ್ಕೆ ಹೋಗು ಎಂದು  ಹೇಳಿದಾಗ ಎಂಥವರ ಮನಸ್ಸು ಕಲಕುವಂತೆ ಮಾತು ಹೇಳುತ್ತಾನೆ.  "ನನ್ನ ಪ್ರಕಾರ ಈ ಆಸ್ಥಿಯಲ್ಲಿ ಮೂರುಭಾಗ ಮಾಡೋನ ಎಂದ ಜಗದೀಶ ಮೆಲ್ಲನೆ ನಗುತ್ತ 'ಇಷ್ಟೇ ತಾನೆ' ಎಂದ ಅಣ್ಣತಮ್ಮರ ಮಾತುಕೇಳಿ ಸುಕನ್ಯ ನಿಮ್ಮ ಆಸ್ತಿಯಲ್ಲಿ ನನಗೆ ಪಾಲು ಬೇಡ ನೀವಿಬ್ಬರೇ ಭಾಗಮಾಡಿಕೊಳ್ಳಿ ನನಗೆ ಬೇಕಾಗಿದಷ್ಟಿದೆ, ನನ್ನ ಚಿಂತೆ ನಿಮಗೆ ಬೇಡ ಎಂದು ಕಡ್ಡಿಮುರಿದಂತೆ ಹೇಳಿದಳು.  ಜಗದೀಶ ಮೆಲ್ಲನೆ ತಮ್ಮನ ಕೈಹಿಡಿದು ಸಂಜಯ, ನಾನು ಎಂದಾದರು ಭಾಗ ಕೇಳಿದ್ದೇನೇನೋ ಎಂದ, ಆಗ ಸಂಜಯ ಇಲ್ಲ ಅಣ್ಣ ನೀನೇನು ಕೇಳಿಲ್ಲ ಎಂದ ಆಗ ಸಂಜಯ ಇಲ್ಲ ಅಣ್ಣ ನಿನೇನು ಕೇಳಿಲ್ಲ ಎಂದನು, ಆದರೆ.......... ನನಗೆ ಅಮೇರಿಕಾದಲ್ಲಿ ಬೇಕಾದಷ್ಟಿದೆ, ನಾನಾಗಲಿ ನನ್ನ ಮಕ್ಕಳಾಗಲಿ ಇಲ್ಲಿ ಬಂದಿರಲು ಸಾಧ್ಯವಿಲ್ಲ.  ನಾವೆಲ್ಲರು ಅಮೇರಿಕಾದ ಪ್ರಜೆಗಳಾಗಿದ್ದೇವೆ.  ನಮಗೆ ಅಲ್ಲಿಯಾವ ತೊಂದರೆಯೂ ಇಲ್ಲ"[೧] ಎಂದು ನೇರವಾಗಿ ಹೇಳಿದನು.  ಇದಾದ ಮೇಲೆ ಸುಕನ್ಯಾ ಇಬ್ಬರು ಅಣ್ಣಂದಿರ ನಡುವೆ ನಿಂತು ನಾವು ಯಾರು ನೂರು ವರ್ಷ ಬದುಕುವುದಿಲ್ಲ ಜಗತ್ತಿನಲ್ಲಿ ನಾವು ಎಷ್ಟು ವರ್ಷ ಬದುಕುತ್ತೇವೆಂಬುದು ಮುಖ್ಯವಲ್ಲ    ನಾವು ಹೇಗೆ ಬದುಕುತ್ತೇವೆ ಎಂಬುದು ಮುಖ್ಯ ಎನ್ನುತ್ತಾಳೆ.

ಬಸವರಾಜಪ್ಪನವರ ವೈಯುಕ್ತಿಕ ವಿಚಾರದಲ್ಲೇ ಸುಮಂಗಲೆ ತಲೆ ಕಡೆಸಿಕೊಳ್ಳುವುದಿಲ್ಲ, ಅವಳ ದೊಡ್ಡತನವನ್ನು ಮರೆಯುತ್ತಾಳೆ, ಎರಡನೆಯದಾಗಿ ಬಸವರಾಪ್ಪನವರು ಎಷ್ಟು ವರ್ಷ ತಮ್ಮ ಜೊತೆ ಅನೈತಿಕ ಸಂಬಂಧ ಇಟ್ಟುಕೊಂಡು ಏನ್ನೊಂದು ಬಯಸದ ಅವಳಿಗೆ ಕದ್ದು ಗುರುಬಸಯ್ಯನವರ ಕಡೆಯಿಂದ  ಒಂದು ಮನೆಯನ್ನು ಕೊಡಿಸಿ ದೊಡ್ಡವ್ಯಕ್ತಿಗಳಾಗುತ್ತಾರೆ.

ಚಂದ್ರಶೇಖರಯ್ಯನವರ ಮಗ ರವಿ ತಮ್ಮ ತಂದೆ ಸಾಕಿಕೊಂಡಿದ್ದ ಅಂಥೋಣಿ, ಪಿಳ್ಳೆ ನಾಗೆಗೌಡರನ್ನೂ ತಮ್ಮ ಸ್ವತಹ ತೋಟವನ್ನೆ ಬಿಟ್ಟುಕೊಟ್ಟು  ಮಾನವೀಯತೆ ಮೇರೆಯುತ್ತಾನೆ.  ನಾಲ್ಕನೆಯದಾಗಿ, ಚಂದ್ರಿಕಾ ಸತ್ತಮೇಲೆ ಇದೇಲ್ಲಾ ನಮ್ಮ ಅಪ್ಪ ಕೊಡಿಸಿರುವುದೆಂದು ಜಗಳ ತೆಗೆಯ ಬಹುದಾಗಿತ್ತು ಆದರೆ ಅವಳು ಜೀವಂತ ವಿರುವಾಗಲೆ ನಿನ್ನ ಕೊನೆಯ ಆಸೆಯನ್ನು ಪೂರೈಸುತ್ತೇನೆ ಎಂದು ಹೇಳಿ, ಅವಳು ಸತ್ತನಂತರ ಅವಳ ವಿಲ್  ಪ್ರಕಾರ ಬಸವನಿಗೆ ಆಸ್ಥಿ ದೊರೆಯುವಂತೆ ಮಾಡುವುದು ಮಾನವೀಯತೆಗೆ ಸಾಕ್ಷಿಯಾಗಿ ನಿಲ್ಲುತ್ತದೆ.

ಐದನೆಯದಾಗಿ ಬಸವರಾಜಪ್ಪನವರ ಹಿರಿಯ ಮಗ ನನಗೆ ಅಮೇರಿಕದಲ್ಲಿ ಬೇಕಾದಷ್ಟಿದೆ.  ನಾವೆಲ್ಲ ಅಮೇರಿಕಾ ಪ್ರಜೆಯಾಗಿದ್ದೇವೆ ಎಂದು ಅಪ್ಪನ ಆಸ್ಥಿಯಲ್ಲಿ ಒಂದು ಬಿಡಿಗಾಸು ತೆಗೆದುಕೊಳ್ಳುವುದಿಲ್ಲ, ಆತನು ಸಹ  ಎಲ್ಲ ಆಸ್ಥಿ ತಮ್ಮನಿಗೆ ಬಿಟ್ಟುಕೊಟ್ಟು ಮಾನವೀಯತೆಯನ್ನು ಮರೆಯುತ್ತಾನೆ.

ಆರನೆಯದಾಗಿ ಚಂದ್ರಿಕಾ ತನ್ನ ತವರು ಮನೆಯವರು ಹಿಂದೆಕೊಟ್ಟ ದ್ವೇಷವನ್ನು ಮನಸ್ಸಿನಲ್ಲಿಟ್ಟುಕೊಂಡು ಮತ್ತು ತನ್ನ ಅತ್ತೆ, ಮಾವನವರು ನೀಡಿದ ಕಿರುಕುಳವನ್ನು ನೆನೆದು ಯಾರು ದಿಕ್ಕು ದೆಸೆ ಇಲ್ಲದ ತನ್ನಲ್ಲಿಯೇ ಕೆಲಸಕ್ಕೆ ನಿಂತ ಬಸವನಿಗೆ ತನ್ನೆಲ್ಲಾ ಆಸ್ತಿಯನ್ನು ಕೊಡುವಂತೆ ವಿಲ್‌ಬರೆದು ಮಾನವೀಯತೆಯನು ಮರೆಯುತ್ತಾಳೆ.  ಹೀಗೆ ಕಾದಂಬರಿ ಗಾತ್ರದಲ್ಲಿ ಚಿಕ್ಕದಾದರು. ಮಾನವೀಯತೆಯ ಮೌಲ್ಯಗಳ ಅಡಿಯಲ್ಲಿ ಇಲಿನ ಪಾತ್ರಗಳು ಬಿಂಬಿತವಾಗಿವೆ.  ಕಾದಂಬರಿಗಾರರು ಆಸ್ತಿ, ಹಣಗಳಿಗೆ ಮಹತ್ವ ಕೊಡದೆ,  ಪ್ರೀತಿ, ವಿಶ್ವಾಸ ಮಾನವ ಸಂಬಂಧಗಳಿಗೆ ಮಹತ್ವಕೊಡುತ್ತಾರೆ.  ಹೀಗಾಗಿ ಕಾದಂಬರಿ ಒಂದು ಮಾನವ ಸಂಬಂಧ ಘಣಿಯಾಗಿ ನಿಲ್ಲುತ್ತದೆ.

**ಅಡಿಟಿಪ್ಪಣಿ**

೧ ಹಳ್ಳಿಗುಡಿ ಡಿ.ವಿ. : ಮಾನವ ಅನುಬಂಧ ಸಂಬಂಧ. ಪು – ಮುನ್ನುಡಿ
೨ ಹಳ್ಳಿಗುಡಿ ಡಿ.ವಿ. : ಮಾನವ ಅನುಬಂಧ ಸಂಬಂಧ. ಪು – ೩
೩ ಹಳ್ಳಿಗುಡಿ ಡಿ.ವಿ. : ಮಾನವ ಅನುಬಂಧ ಸಂಬಂಧ. ಪು – ೩
೪ ಹಳ್ಳಿಗುಡಿ ಡಿ.ವಿ. : ಮಾನವ ಅನುಬಂಧ ಸಂಬಂಧ. ಪು – ೭೯



**ಶಿವಗಂಗಾ U. ಬಿಲಗುಂದಿ**
ಕನ್ನಡ ಅಧ್ಯಯನ ಸಂಸ್ಥೆ, **ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.**